**ಸಾಕ್ಷಿಗೆ ದಿನಾಂಕ 13-01-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ಜೆ ಜಿ ಎಸ್ ವಕೀಲರಿಂದಃ**

1. ಅರ್ಜಿದಾರರಿಗೆ ನಾನು ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ ಎಂದರೆ ಸರಿ. ನಾನು Specialized in Neuro Re-habitation and mental health from Nimhans ಆಗಿರುತ್ತೇನೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಮುಖ್ಯ ವೈದ್ಯಾಧಿಕಾರಿ, ವೈದ್ಯಕೀಯ ಅಧೀಕ್ಷಕರು, ಮನೋವೈದ್ಯರು ಮತ್ತು ಮನೋಶಾಸ್ತ್ರಜ್ಞರು ಮಾತ್ರ ಅಂಗನ್ಯೂನತೆ ನಿರ್ಧರಿಸಬೇಕು ಎಂದರೆ ಸರಿ. ಈ ಮೇಲೆ ತಿಳಿಸಿದ ವೃತ್ತಿಗಳಡಿ ನಾನು ಬರುವುದಿಲ್ಲ ಎಂದರೆ ಸರಿಯಲ್ಲ. ಕೇಂದ್ರ ಸರ್ಕಾರದಿಂದ ನೇಮಿಸಿದ ವೈದ್ಯರು ಅಥವಾ ನಮ್ಮ ಆಸ್ಪತ್ರೆಯ ಮಂಡಳಿಯ ಸದಸ್ಯರಾಗಿದ್ದವರು ಮಾತ್ರ ಅಂಗನ್ಯೂನತೆಯ ನಿರ್ಧರಿಸಬೇಕು ಎಂದರೆ ಸರಿಯಲ್ಲ.

2. ನಾನು ಗಾಯಾಳುವಿಗೆ ಚಿಕಿತ್ಸೆ ನೀಡಿ ಅವರಿಗೆ ಹೆಚ್ಚಿನ ಪುನಶ್ಚೇತನ ನೀಡುತ್ತೇನೆ. ನಾನು ಅರ್ಜಿದಾರರಿಗೆ ಸಂಬಂಧಿಸಿದ ಡಿಸ್ಚಾರ್ಜ್ ಸಮ್ಮರಿ ಮತ್ತು ಗಾಯದ ಪ್ರಮಾಣಪತ್ರವನ್ನು ಮಾತ್ರ ನೋಡಿರುತ್ತೇನೆ. ಅರ್ಜಿದಾರರ ಬಿಡದಿ ಸರ್ಕಾರಿ ಆಸ್ಪತ್ರೆಯ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಅರ್ಜಿದಾರರ ರಾಮನಗರ ಸರ್ಕಾರಿ ಆಸ್ಪತ್ರೆಯ ಗಾಯದ ಪ್ರಮಾಣಪತ್ರವನ್ನು ಹೊರತುಪಡಿಸಿ ಉಳಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಡಿಸ್ಚಾರ್ಜ್ ಸಮ್ಮರಿಯ 5ನೇ ಗಾಯ ಸಾದಾ ಸ್ವರೂಪದ ಗಾಯ ಎಂದರೆ ಸರಿಯಲ್ಲ. ಸದರಿ ಗಾಯಕ್ಕೆ ಅಭಿಪ್ರಾಯ ನೀಡಬೇಕಾದರೆ ಸುಮಾರು ಕನಿಷ್ಟ 3 ವರ್ಷಗಳ ಪುನಶ್ಚೇತನ ನಿಗಾದಲ್ಲಿಡಬೇಕು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಉಂಟಾದ 5 ನೇ ಗಾಯಕ್ಕೆ ಶಸ್ತ್ರಚಿಕಿತ್ಸೆ ಮಾಡಿಲ್ಲ ಎಂದರೆ ಸರಿಯಲ್ಲ.

3. ನಾನು IDEA SCORE ಪದ್ಧತಿಯಡಿ ಅಂಗನ್ಯೂನತೆಯನ್ನು ನೀಡಿರುತ್ತೇನೆ. IDEA SCORE ಪದ್ಧತಿಯನ್ನು ಅಳವಡಿಸಿಕೊಳ್ಳುವ ಪೂರ್ವದಲ್ಲಿ I.Q. ಪರೀಕ್ಷೆ

ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. I.Q. ಪರೀಕ್ಷೆಯ ಮುಖಾಂತರ ಅರ್ಜಿದಾರರ ಜೀವನ ಶೈಲಿ, ಜ್ಞಾಪಕ ಶಕ್ತಿ ಮತ್ತು ಆತ ಮಾಡುವ ಕೆಲಸದ ಬಗ್ಗೆ ಕಂಡು ಹಿಡಿಯಬಹುದು ಎಂದರೆ ತಲೆಯ ಗಾಯವಾಗಿರುವುದರಿಂದ M.S.E. ಪರೀಕ್ಷೆ ಮಾಡಲಾಗಿರುತ್ತದೆ. ನಿಪಿ.3 ಪ್ರಕಾರ ಅರ್ಜಿದಾರರ ಗಾಯದ ಹಿನ್ನೆಲೆಯೂ ಎರಡು ವರ್ಷಗಳ ಹಿಂದೆ ಬಿದ್ದು ತಲೆಗೆ ಗಾಯ ಮಾಡಿಕೊಂಡಿರುತ್ತಾರೆ ಮತ್ತು ಎರಡು ವರ್ಷಗಳ ಮುಂಚೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂದು ನಮೂದಾಗಿದೆ ಎಂದರೆ ಸರಿ. ಅರ್ಜಿದಾರರು ಸಂಪೂರ್ಣವಾಗಿ ಗುಣಮುಖರಾಗಿರುವುದಿಲ್ಲ.

4. ಡಾ.ಅರ್ಪಿತಾರವರು ಅರ್ಜಿದಾರರನ್ನು ಪರೀಕ್ಷೆ ಮಾಡಿ ನಿಪಿ.2 ರಂತೆ ವರದಿ ನೀಡಿರುತ್ತಾರೆ. ಡಾ. ಅರ್ಪಿತಾರವರು ಅರ್ಜಿದಾರರನ್ನು ಪರೀಕ್ಷೆ ಮಾಡಬೇಕಾದರೆ ಪ್ರತ್ಯೇಕ ಶೀಟ್ ಗಳು ಇದ್ದು ಅವುಗಳಿಗೆ ಅವರೇ ಉತ್ತರ ಬರೆಯಬೇಕು ಎಂದರೆ ಸರಿ. ಡಾ. ಅರ್ಪಿತಾ ರವರು ಯಾವ ರೀತಿ ವರ್ಕ್ ಶೀಟ್ ಗಳನ್ನು ಬಳಸಿದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಡಾ. ಅರ್ಪಿತಾ ರವರು ನೀಡಿದ ವರದಿಯ ಆಧಾರದ ಮೇರೆಗೆ ನಾನ ಅಂಗನ್ಯೂನತೆಯನ್ನು ನಿರ್ಧರಿಸಿರುತ್ತೇನೆ ಎಂದರೆ ನಾನು ಮಾಡಿದ ಪರೀಕ್ಷೆ, ಡಾ. ಅರ್ಪಿತಾರವರ ವರದಿ, ಕೇಂದ್ರ ಸರ್ಕಾರದ ಮಾರ್ಗಸೂಚಿಗಳು, ಇತ್ತೀಚಿನ ಸಿಟಿ ಬ್ರೈನ್ ವರದಿಗಳ ಆಧಾರ ಮೇರೆಗೆ ಅಂಗನ್ಯೂನತೆಯನ್ನು ನಿರ್ಧರಿಸಿರುತ್ತೇನೆ.

5. ಅರ್ಜಿದಾರರಿಗೆ ದಿನನಿತ್ಯದ ಕೆಲಸಗಳನ್ನು ಮಾಡಲು ತೊಂದರೆ ಇರುವುದಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಅವರ ಹಿಂದಿನ ಜೀವನ ಶೈಲಿಯೂ ಸಹ ನೆನಪಿನಲ್ಲಿರುತ್ತದೆ ಎಂದರೆ ಇರಬಹುದು. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 4 ನೇ ಕಂಡಿಕೆಯಲ್ಲಿ ಹೇಳಿರುವ ತೊಂದರೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಆ ತೊಂದರೆಗಳು ಇದ್ದರೂ ಸಹ ಕ್ರಮೇಣ ಕಡಿಮೆಯಾಗುತ್ತವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ರೀತಿಯ ಮಾನಸಿಕ

ತೊಂದರೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನೀಡಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ.

6. ಅರ್ಜಿದಾರರಿಗೆ ಯಾವುದೇ ರೀತಿಯ ಅಂಗನ್ಯೂನತೆ ಇಲ್ಲದೇ ಇದ್ದರೂ ಸಹ ಶೇ.33 ರಷ್ಟು ಸುಳ್ಳಾಗಿ ಅಂಗನ್ಯೂನತೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅನುಕೂಲವಾಗಲೆಂದು ನಾನು ಮತ್ತು ಡಾ. ಅರ್ಪಿತಾರವರು ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಡಾ. ಅರ್ಪಿತಾ ರವರು ನಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಬಹುದು ಎಂದರೆ ಸರಿಯಲ್ಲ. ನಿಪಿ.1 ಸುಳ್ಳು ವರದಿ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅಂಗನ್ಯೂನತೆಯನ್ನು ನಿರ್ಧರಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅನುಕೂಲವಾಗಲೀ ಎನ್ನುವ ಉದ್ದೇಶದಿಂದ ಹೆಚ್ಚಿನ ಪ್ರಮಾಣದ ಅಂಗನ್ಯೂನತೆಯನ್ನು ನಿರ್ಧರಿಸಿ, ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**